
ಅವನ ಮುಖವು ಕೆಂಡದಂತೆ ಕೆಂಪಾಗಿ, ವಿಚಿತ್ರ ರೀತಿಯಲ್ಲಿ ಕಂಪಿಸುತ್ತಿತ್ತು. ಕಣ್ಣುಗಳು ಹಸಿದ ಹುಲಿಯ ಕಣ್ಣುಗಳಂತೆ ನಿಗಿನಿಗಿ ಎನ್ನುತ್ತಿದ್ದವು. ಜ್ವರಬಂದವನಂತೆ, ಉದ್ರೇಕಗೊಂಡ ಹಾವಿನಂತೆ ಬುಸುಗುಟ್ಟುತ್ತಿದ್ದ. ಅವನು ಮತ್ತೆ ಅವಳ ಕಿವಿಯ ಹತ್ತಿರ ಮಂತ್ರವನ್ನು ಬಡಬಡಿಸತೊಡಗಿದ. ಅವನ ಮಂತ್ರಗಳು ತುಂಬಿದ ಬಿಸಿಯುಸಿರು ಸೌಮ್ಯಳ ಕತ್ತಿನ ಬೆತ್ತಲೆಯ ಭಾಗ ಸೋಕಿ, ಕಿವಿಗಳ ಹಿಂಭಾಗ ಸವರಿಕೊಂಡು, ಬೆನ್ನು ನಿತಂಬ, ಎದೆ, ಸೊಂಟದ ಮೂಲಕ ದೇಹದ ಮೂಲೆಮೂಲೆಯನ್ನು ತಲುಪಿ, ಸೌಮ್ಯಳು ಕ್ರಮೇಣ ನಿಂತಲ್ಲೇ ಮತ್ತೆ ವಾಸ್ತವದಿಂದ ಜಾರತೊಡಗಿದಳು. ಇರುವೆಗಳು ಮೈಮೇಲೆಲ್ಲಾ ಓಡಾಡುತ್ತಾ, ಬೆಲ್ಲಕ್ಕೆ ಮುಕುರಿಕೊಳ್ಳುವಂತೆ ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳತೊಡಗಿದವು. ಇರುವೆಗಳು ಒಟ್ಟಾಗುತ್ತಾ, ಸೇರುತ್ತಾ ಒಂದು ದೈತ್ಯ ಸರ್ಪವಾಗಿ ಬದಲಾಗತೊಡಗಿದವು. ಸರ್ಪ ಹೆಡೆ ಎತ್ತಿ, ದೇಹದ ಯಾವ್ಯಾವುದೋ ಭಾಗಕ್ಕೆಲ್ಲಾ ಚುಚ್ಚತೊಡಗಿತು. ಅದು ಬೆಳೆಯುತ್ತಾ ತನ್ನ ದೇಹವನ್ನು ಹೆಬ್ಬಾವಿನಂತೆ ಬಳಸುತ್ತಾ ಬಿಗಿಯತೊಡಗಿತು. ಈಗ ಅದು ತನ್ನನ್ನು ಸಾಯಿಸುತ್ತದೆಂದು ಸೌಮ್ಯ ಗಡಗಡ ನಡುಗತೊಡಗಿದಳು. ಎದೆ ಹಾರಿಹಾರಿ ಬೀಳುತ್ತಿತ್ತು. ಇದು ವಾಸ್ತವವೋ ಇಲ್ಲ ಭ್ರಮೆಯೋ ಅವಳಿಗೆ ಒಂದೂ ತಿಳಿಯದಾಗಿತ್ತು. ತಾನು ಈ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ವಿವರವಾಗಿ ಹೇಳಿದ್ದ ತಾಯಿಯ ಮಾತುಗಳು ಮತ್ತೊಮ್ಮೆ ಕಿವಿಯಲ್ಲಿ ಪ್ರತಿಧ್ವನಿಸಿದವು. ಒಂದು ಕ್ಷಣ ತಾಯಿಯ ಕಷ್ಟಗಳೆಲ್ಲಾ ಕಣ್ಣ ಮುಂದೆ ಬಂದವು. ತಾಯಿಯು ಕತ್ತಾಳೆಯನ್ನು ತಲೆಯ ಮೇಲೆ ಹೊತ್ತು, ಬೆವರು ಸುರಿಸುತ್ತಾ ಕಷ್ಟಪಡುತ್ತಿರುವ ದೃಶ್ಯ ಕಣ್ಣ ಮುಂದೆ ಬಂತು. ಬೆನ್ನ ಹಿಂದೆ ಸರ್ಪ ಬುಸುಗುಡುತ್ತಿತ್ತು. ತನ್ನ ಓದು, ಭವಿಷ್ಯ, ಮಲ್ಲಶೆಟ್ಟಪ್ಪ ಶೀಲ್ಡ್, ಎಲ್ಲವೂ ಸೌಮ್ಯಳ ಕಣ್ಣ ಮುಂದೆ ಕುಣಿಯತೊಡಗಿದವು. ಕತ್ತಾಳೆ ರಂಗಮ್ಮನೇ ಮಗಳ ಮೈಮೇಲೆ ಬಂದಂತಾಯಿತು. ಹಲ್ಲುಕಡಿಯುತ್ತಾ 'ರಂಡೆ ಮಗನೇ, ನಿನ್ನ ಮಂತ್ರಕ್ಕೆ ನನ್ನ ಎಕ್ಕಡಾ ಹಾಕಾ, ನಿನ್ನಂತವರು ಇರಬಾರ್ದು...' ಎಂದು ಶಪಿಸುತ್ತಾ, ಹಿಂದೆ ತಿರುಗಿ ಆವೇಶದಿಂದ ಸೌಮ್ಯ ತನ್ನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಆ ಕತ್ತಾಳೆ ಮುಳ್ಳಿನಿಂದ ಹೆಡೆ ಎತ್ತಿದ್ದ ಆ ಸರ್ಪಕ್ಕೆ ಬಲವಾಗಿ ಚುಚ್ಚಿ, ಅಲ್ಲೇ ಕುಸಿದಳು. ಆಗ ಉಂಟಾದ ಗದ್ದಲದಲ್ಲಿ ಯಾರೋ ಬಸ್ಸನ್ನು ನಿಲ್ಲಿಸಿದರು. ಮತ್ಯಾರೋ ಸೌಮ್ಯಳಿಗೆ ಗಾಳಿಹಾಕಿದರು, ಮುಖಕ್ಕೆ ನೀರು ಚಿಮುಕಿಸಿದರು. ಅರೆಪ್ರಜ್ಞಾವಸ್ಥೆಯಲ್ಲಿದ್ದ ಸೌಮ್ಯಳ ಕಣ್ಣಮುಂದೆ ಆ ದೊಡ್ಡ ಸರ್ಪ ವಿಲವಿಲನೇ ರಕ್ತಕಾರಿಕೊಂಡು ಒದ್ದಾಡಿದಂತೆ ಕಾಣಿಸಿತು. ಅರ್ಧಂಬರ್ಧ ತೆರೆದಿದ್ದ ಕಣ್ಣುಗಳಿಂದ ನೋಡುತ್ತಿದ್ದ ಸೌಮ್ಯಳಿಗೆ ಆ ರೀತಿ ಒದ್ದಾಡುತ್ತಿದ್ದುದು ಹಾವೋ ಇಲ್ಲ ನವರಂಗಿಯೋ ಎಂಬುದು ಸರಿಯಾಗಿ ತಿಳಿಯಲಿಲ್ಲ. ಆ ಅವಸ್ಥೆಯಲ್ಲೂ ಸೌಮ್ಯಳಿಗೆ ತನ್ನನ್ನು ಹೆದರಿಸುತ್ತಿದ್ದ ಸರ್ಪಕ್ಕೆ ಇಂದು ಸರಿಯಾದ ಶಾಸ್ತಿ ಮಾಡಿದ್ದೇನೆಂದು ಅನಿಸಿತು. ಈ ಮಧ್ಯೆ ಸರ್ಪವು ವಿಕಾರವಾಗಿ ಕಿರುಚುತ್ತಾ ಬಸ್ಸಿನಿಂದ ಕೆಳಕ್ಕೆ ಧುಮುಕಿ ಹೊಲಗದ್ದೆಗಳಲ್ಲಿ ಓಡುತ್ತಾ, ಮರೆಯಾಗಿ ಹೋಗಿದ್ದು ಅವಳಿಗೆ ಕಂಡಂತಾಯಿತು.



ಸೌಮ್ಯ ಮತ್ತೆ ಎಂದಿನಂತೆ ಲವಲವಿಕೆಯಿಂದ ಶಾಲೆಗೆ ಹೋಗುತ್ತಿದ್ದಾಳೆ. ಆ ವರ್ಷದ ಅತ್ಯುತ್ತಮ ವಿದ್ಯಾರ್ಥಿಗೆ ಕೊಡುವ ಶೀಲ್ಡ್ ಅನ್ನು ಪಡೆಯುವ ಹೆಸರುಗಳಲ್ಲಿ ಸೌಮ್ಯಳ ಹೆಸರೇ ಮತ್ತೆ ಮುಂಚೂಣಿಗೆ ಬಂದಿದೆ. ನವರಂಗಿಯ ಕಿರಾಣಿ ಅಂಗಡಿ ಒಂದು ತಿಂಗಳಿನಿಂದ ಬಾಗಿಲೇ ತೆರೆದಿಲ್ಲ. ಅವನು ಬೆಂಗಳೂರಿನ ಯಾವುದೋ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿ, ಚಿಕಿತ್ಸೆ ಪಡೆಯುತ್ತಿದ್ದಾನಂತೆ. ಅವನ ಕಾಯಿಲೆಯ ಬಗ್ಗೆ ಯಾರಿಗೂ ಸರಿಯಾಗಿ ಮಾಹಿತಿಯಿಲ್ಲ. ಬೀಡಾಡಿ ದನಗಳು ಪದೇ ಪದೇ ಹೊಲಕ್ಕೆ ನುಗ್ಗಿ, ಬೆಳೆಯನ್ನು ಹಾಳು ಮಾಡಬಾರದೆಂದು ರಂಗಮ್ಮನು ತನ್ನ ಹೊಲಕ್ಕೆ ಕತ್ತಾಳೆಯನ್ನು ಕಟ್ಟಿಸುತ್ತಿದ್ದಾಳೆ. ●